

ನಿಜವಾದ ಅನುಭವ, ಅದೇ ನಿಜವಾದ ಪ್ರವಾಸ ಎಂದು ಯೋಚಿಸುವವರು ಎಷ್ಟೋ ಮಂದಿ ಇದ್ದಾರೆ. ಆದರೆ ನಮ್ಮ ಸುತ್ತಮುತ್ತಲೇ ಇರುವ ಸಗ್ಗದಂತಹ ಊರುಗಳನ್ನು, ಆ ಊರಲ್ಲಿರುವ ಹಳೆಯ ಮನೆ, ಸಾಂಪ್ರದಾಯಿಕ ಹಳ್ಳಿ, ತೋಟ, ನೆಟ್ಟಿ ಮುಗಿಸಿದ ಗದ್ದೆಯ ಅಸದೃಶ ಚೆಲುವು. ಸ್ವರ್ಗಕ್ಕೇ ಕರೆದುಕೊಂಡು ಹೋಗುತ್ತೇನೋ ಎಂದು ಆಗಷ್ಟೇ ಸುರಿವ ಮಳೆಗೆ ಅಭ್ಯಂಜನ ಮಾಡುತ್ತಿರುವಂತೆ ಕಾಣುವ ದಾರಿಗಳು, ಅಲ್ಲೇ ಹರಿಯುತ್ತಿರುವ ಒಂದು ಪುಟ್ಟ ಹಳ್ಳ, ಆ ಹಳ್ಳದ ಆಚೀಚೆ ಬೆಳೆದಿರುವ ಅಣಬೆ, ಪಾಚಿಗಳ ಹಸುರು ಹಾಸು, ಸುತ್ತಲೂ ಕೂಗುವ ಜೀರುಂಡೆಗಳ ಮಹಾಸಂಗೀತ, ರಾತ್ರಿ ನಕ್ಷತ್ರಗಳಂತೆ ಮೂಡುವ ಮಿಣುಕುಹುಳಗಳ ಬೆಳಕು, ಇವೆಲ್ಲವೂ ಹೊಸ ಸಾಧ್ಯತೆಗಳನ್ನು ನಮ್ಮ ಮುಂದಿಡುತ್ತಾ ಸಾಗುತ್ತವೆ. ಮಳೆಗಾಲದಲ್ಲಿ ಮಾಡುವ ಒಂದು ಸುತ್ತಾಟದ ಮೂಲಕ ಒಂದು ಊರಿನ ಕೃಷಿ, ಸಂಪ್ರದಾಯ, ಜೀವಜಗತ್ತು, ಜನಜೀವನ – ಹೀಗೆ ಎಲ್ಲವನ್ನೂ ಅರ್ಥ ಮಾಡಿಕೊಳ್ಳಬಹುದು.

ಇವೆಲ್ಲವನ್ನೂ ಸಹಜವಾಗಿ ಅನುಭವಿಸಿದರೆ ಸುರಿವ ಮಳೆ, ಆ ಊರು, ಆ ಊರ ಹಸಿರು ನಮ್ಮೊಳಗೆ ಎಬ್ಬಿಸುವ ಖುಷಿಯ ಅಲೆಗಳು ಎದೆಯ ನೆನಪಿನ ತೀರದಲ್ಲಿ ಎಂದಿಗೂ ಭೋರ್ಗರೆಯುತ್ತಲೇ ಇರುತ್ತವೆ. ಮಳೆಗಾಲದಲ್ಲೊಂದು ಸುತ್ತಾಟ ಮಾಡುವುದಕ್ಕೆ ಎಲ್ಲರ ದೃಷ್ಟಿಯಲ್ಲಿ ಪ್ರವಾಸ ತಾಣಗಳೆಂದು ಕರೆಸುವ ಜಾಗಗಳೇ ಬೇಕೆಂದಿಲ್ಲ. ಕಣ್ತೆರೆದು ನೋಡಿದರೆ ನಮ್ಮೂರಿನ ಪಕ್ಕದಲ್ಲೇ ಇರುವ ಪುಟ್ಟ ದಾರಿ ಹೊಕ್ಕರೂ, ನಾವು ಈವರೆಗೂ ಕಾಣದ ಲೋಕವೊಂದು ಸುರಿವ ಮಳೆಗೆ ಸದ್ದಿಲ್ಲದೇ ಹುಟ್ಟಿಕೊಂಡಂತೆ ಧುತ್ತನೇ ಎದುರಾಗಬಹುದು. ಇಂತಹ ತಾಣಗಳೂ ಸುರಿಸುವ ಖುಷಿಯ ಮಳೆಯಲ್ಲೂ ನೆನೆದುಬಿಡೋಣ.

## ಮರೆಯಲೇಬಾರದ ಸಂಗತಿಗಳಿವು

- ಮಳೆಗಾಲದ ಸುತ್ತಾಟದಲ್ಲಿ ಸಿಗುವ ನದಿ–ತೊರೆ ಸೇರಿದಂತೆ ಯಾವುದೇ ಜಲಮೂಲಗಳೇ ಆಗಿರಲಿ, ಅವು ನಮ್ಮ ಬದುಕಿಗೆ ಅಮೃತ ಕೊಡುವ ತಾಣಗಳು, ಪ್ಲಾಸ್ಟಿಕ್, ಬಾಟಲಿ ಎಸೆದು ಅವುಗಳ ಅಂದಗೆಡಿಸುವ ಹಕ್ಕು ಯಾರಿಗೂ ಇಲ್ಲ. ಜಲಮೂಲಗಳನ್ನು ಪೂಜ್ಯ ಭಾವದಿಂದ ಕಾಯೋಣ, ಕಾಪಾಡೋಣ. ಇತರ ಪ್ರವಾಸಿಗರು ಇಂತಹ ತಾಣಗಳಿಗೆ ಕಸ ಎಸೆಯುವ ಮೊದಲು ಯಾಕೆ ಎಸೆಯಬಾರದು ಎನ್ನುವುದನ್ನು ಅವರಿಗೆ ತಿಳಿಹೇಳಬೇಕಿದೆ.
- ನಮ್ಮ ರಾಜ್ಯದ ಬಹುತೇಕ ಜಲಪಾತ, ವ್ಯೂ ಪಾಯಿಂಟ್‌ಗಳಲ್ಲಿ ಪ್ರವಾಸಿಗರೇ ಎಸೆದಿರುವ ಟನ್‌ಗಟ್ಟಲೇ ಪ್ಲಾಸ್ಟಿಕ್ ತ್ಯಾಜ್ಯಗಳು ವಿಲೇವಾರಿ ಮಾಡಲು ಸಾಧ್ಯವಿಲ್ಲದಷ್ಟು ಪ್ರಮಾಣದಲ್ಲಿ ಬೆಳೆದು ಭೂಮಿ ಸೇರುತ್ತಿದೆ. ಪ್ರವಾಸಿ ತಾಣಗಳಲ್ಲಿ ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಬೇಕಿದೆ. ಇದು ಪ್ರವಾಸಿಗರ ಇಚ್ಛಾಶಕ್ತಿಯಿಂದಷ್ಟೇ ಸಾಧ್ಯ.
- ಪ್ರವಾಸ ತಾಣಗಳಲ್ಲಿ ಊಟ ತಿಂಡಿಗಳ ನೆಪದಲ್ಲಿ ಪ್ಲಾಸ್ಟಿಕ್ ಪೇಪರ್ ಲೋಟಗಳು, ಪ್ಲೇಟ್‌ಗಳ ಬಳಕೆ ಅತಿಯಾಗುತ್ತಿದೆ. ಪೇಪರ್ ಲೋಟಗಳೂ ಬರೀ ಹೆಸರಿಗಷ್ಟೇ. ನಿಜವಾದ ಅರ್ಥದಲ್ಲಿ ಅದು ತೆಳುವಾದ ಪ್ಲಾಸ್ಟಿಕ್‌ನಿಂದಲೇ ರೂಪುಗೊಂಡಿದೆ. ಇಂತಹ ಲೋಟಗಳನ್ನು ಆದಷ್ಟು ಬಳಸದೇ ಪರ್ಯಾಯವಾಗಿ ಸ್ಟೀಲ್ ಲೋಟಗಳನ್ನು ಜೊತೆಗೊಯ್ಯೋಣ.
- ಪ್ರವಾಸಿತಾಣಗಳಲ್ಲಿ ಒಬ್ಬರು ಪರಿಸರಸ್ನೇಹಿ ಚಟುವಟಿಕೆಗಳನ್ನು ಅಳವಡಿಸಿಕೊಂಡರೆ, ಇತರರು ಅದನ್ನು ಗಮನಿಸುತ್ತಾರೆ. ಒಬ್ಬರಿಂದ ಮತ್ತೊಬ್ಬರೂ ಬದಲಾಗಬಹುದು.
- ಮೋಜುಮಸ್ತಿ ಜೊತೆಗೆ ಪ್ರವಾಸದಲ್ಲಿ ಹೊಸತನ್ನು ಅರಿಯುವ ಕೌತುಕ ಇರಲಿ.
- ಮಳೆಗಾಲದಲ್ಲಿ ಜಲಪಾತ, ನೀರಿರುವ ತಾಣಗಳಲ್ಲಿ ಎಷ್ಟು ಎಚ್ಚರಿಕೆಯಿಂದಿದ್ದರೂ ಸಾಲದು. ನೀರಿಗೆ ಮೈಯೊಡ್ಡುವ ಸಾಹಸ ಬೇಡ. ಪ್ರಕೃತಿಯ ಅಗಾಧತೆಯ ಎದುರು ನಮ್ಮೆಲ್ಲಾ ಸಾಹಸಗಳೂ ಶೂನ್ಯ ಎಂಬುದು ಮನಸ್ಸಿನಲ್ಲಿರಲಿ.
- ಮನಸ್ಸಿಗೆ ಆನಂದ ಕೊಡುವ ತಾಣಗಳಲ್ಲಿ ಅಲ್ಲಿ ಬೀಳುವ ಮಳೆ, ವಾಸ್ತವದ ಅಂದಚೆಂದವನ್ನು ಮನಸಾರೆ ಅನುಭವಿಸೋಣ. ಎಲ್ಲವನ್ನೂ ರೀಲ್ಸ್ ವಿಡಿಯೊ ಮಾಡುವ ಮೊದಲು ನಮ್ಮೊಳಗೆ ಅಲ್ಲಿನ ಪರಿಸರವನ್ನು ಸೆರೆಹಿಡಿದರೆ ಎದೆಯೊಳಗೆ ಆ ಚಿತ್ರಗಳು ಶಾಶ್ವತವಾಗಿರುತ್ತದೆ.
- ರಿಲ್ಯಾಕ್ಸ್ ಆಗಬೇಕು ಎಂಬ ಉದ್ದೇಶದೊಂದಿಗೆ ಮಳೆ ಪ್ರವಾಸ ಹೊರಟರೆ ಪಯಣ ಮಾಡುವ ಆ ಮಳೆಯ ದಾರಿಯಲ್ಲಿ ಒಂದಷ್ಟು ಶಾಂತಚಿತ್ತರಾಗಿ ಮಳೆಯನ್ನು ಗಮನಿಸಿ, ಅನುಭವಿಸಿ. ಇದು ನೆಮ್ಮದಿಯ ದಾರಿ.

ಇದು ಮಳೆಯ ಆಲಾಪದ ಸಮಯ. ಈ ಬಾರಿಯ ಮಳೆಗಾಲ ಸಮೃದ್ಧವಾಗಿರುವಂತಿದೆ. ಮುಂಗಾರು ನಾಡಿನೆಲ್ಲೆಡೆ ತನ್ನ ಇರುವು ಪ್ರಕಟಿಸಿದೆ. ನದಿಗಳು ಮೈದುಂಬಿಕೊಂಡಿವೆ. ಬೆಟ್ಟ ಬಯಲು ಕಣಿವೆಗಳು ಹಸಿರು ಉಮ್ಮಳಿಸುತ್ತಿವೆ. ಜಲಪಾತಗಳಲ್ಲಿ ನೀರಹಾಡು. ಪ್ರವಾಸ ಕೈಗೊಳ್ಳಲು ಇನ್ನೇನು ಬೇಕು?

ಪ್ರತಿಕ್ರಿಯಿಸಿ: feedback@sudha.co.in